**1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 30-01-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರವರಿಂದಃ

ನಾನು ಎಂ.ಎಸ್ಸಿ ಯ ಸ್ಟೆಟಿಟಿಕ್ಸ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ದೂರಿನಲ್ಲಿನ ನನ್ನ ಹೆಸರು , ವಿಳಾಸ ಮತ್ತು ಹುದ್ದೆಯನ್ನು ಹಾಕಲು ಹೇಳಿದ್ದೆ. ಸದರಿಯನ್ನು ನಮೂದಿಸಲಾಗಿದೆ. ಸದರಿ ದೂರಿನಲ್ಲಿ ನಾನು ಹೇಳುವಂತೆ ನನ್ನ ಹೆಸರು , ವಿಳಾಸ ಮತ್ತು ಹುದ್ದೆ ಯನ್ನು ಹಾಕಿಲ್ಲದಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರ ಬ್ಯಾಂಕಿಗೆ ಅಧ್ಯಕ್ಷ , ಉಪಾಧ್ಯಕ್ಷ ಹಾಗೂ ನಿರ್ದೇಶಕರನ್ನು ಒಳಗೊಂಡ ಒಂದು ಕಮಿಟಿ ಇದೆ ಎಂದರೆ ಸರಿ . ಅದರಂತೆ ಲೋನ ರಿಕವರಿ ಕಮಿಟಿ ಇದೆ ಎಂದರೆ ಸರಿಯಲ್ಲ , ಸಾಕ್ಷಿ ಮುಂದುವರೆದು ಲೋನ ರಿಕವರಿ ಆಫೀಸರ್ ಎಂದು ಇಬ್ಬರನ್ನು ನೇಮಿಸಲಾಗಿದೆ ಎನ್ನುತ್ತಾರೆ. ಅವರುಗಳೆಂದರೆ ಶಿವಕುಮಾರ ಮತ್ತು ಮರಿಸ್ವಾಮಿ . ಪ್ರಸ್ತುತ ಶಿವಕುಮಾರ ಮಾತ್ರ ಇದ್ದಾರೆ . ಪ್ರಸ್ತುತ ಪ್ರಕರಣದಲ್ಲಿನ ವಿವಾದಕ್ಕೆ ಸಂಬಂಧಿಸಿದಂತೆ ಲೋನ ರಿಕವರಿ ಆಫೀಸರ್ ಶಿವಕುಮಾರ ಆಗಿದ್ದರು. ಉಮಾಶಂಕರ ಎಂಬುವವರು 4 ಲಕ್ಷ ಲೋನ್ ಪಡೆದಿದ್ದು 60 ತಿಂಗಳವರೆಗೆ ಇ ಎಂ ಐ ಪಾವತಿಸಲು ಒಪ್ಪಿದ್ದು . ಪ್ರತಿತಿಂಗಳ ಇ ಎಂ ಐ ನಲ್ಲಿ ಅಸಲು 22,667/- ಮತ್ತು ಬಡ್ಡಿ ಇರುತ್ತದೆ. ಸಾಕ್ಷಿ ಮುಂದುವರೆದು ಅಸಲು ಹಣ ಪಾವತಿಸುವಂತೆ ಹೋದಂತೆ ಬಡ್ಡಿ ಕಡಿಮೆಯಾಗುತ್ತಾ ಹೋಗುತ್ತದೆ ಎನ್ನುತ್ತಾರೆ. ಸದರಿ ಸಾಲವು ದಿನಾಂಕ 23-02-2021 ರಿಂದ 23-01-2026 ಕ್ಕೆ ಕೊನೆಯಾಗುತ್ತಿತ್ತು . ಸದರಿಯವರು ಮೊದಲು ಸಾಲ ಪಡೆದಂದಿನಿಂದ ಜನವರಿ 2023 ರ ವರೆಗೆ ಇ ಎಂ ಐ ಪಾವತಿಸಿದ್ದಾರೆ . ನಂತರ ಇ ಎಂ ಐ ಪಾವತಿಸಿಲ್ಲ. ಸದರಿಯವರಿಗೆ ಉಳಿದ ಇ ಎಂ ಐ ಪಾವತಿಸುವಂತೆ ಹಿಂದಿನ ವ್ಯವಸ್ಥಾಪಕರು ನೋಟೀಸ ನೀಡಿದ್ದು ಅದನ್ನು ವಕೀಲರಿಗೆ

ನೀಡಿದ್ದೇನೆ. ಸದರಿ ದಾಖಲೆಯನ್ನು ಹಾಜರು ಪಡಿಸುತ್ತೇನೆ. ಸದರಿ ನೋಟೀಸನ್ನು ಉಮಾಶಂಕರರವರಿಗಾಗಲೀ ಅಥವಾ ಜಾಮೀನುದಾರರಾದ ಆರೋಪಿಯವರಿಗಾಗಲೀ ನೀಡಿಲ್ಲದಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಸಾಲ ಬಾಕಿ ಇದ್ದು ಸಾಲಗಾರರ ಯಾವುದೇ ಖಾತೆಯಲ್ಲಿ ಹಣವಿದ್ದಲ್ಲಿ ಅದನ್ನು ಸಾಲಕ್ಕೆ ವಜಾ ಮಾಡಬಹುದು ಎಂದರೆ ಸರಿ . ಸದರಿ ಉಮಾಶಂಕರವರ ಖಾತೆಯಲ್ಲಿ ಇದ್ದ ಗ್ರ್ಯಾಚುಯಿಟಿ ಹಣವಾದ 10 -12 ಲಕ್ಷ ಹಣವನ್ನು ಸಾಲದ ಹಣಕ್ಕೆ ವಜಾ ಮಾಡಿಕೊಳ್ಳುವುದಾಗಿ ಅಥವಾ ಏಕೆ ವಜಾ ಮಾಡಿಕೊಳ್ಳಬಾರದು ಎಂಬುದಾಗಿ ನೋಟೀಸ ನೀಡಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ಅವರ ಖಾತೆಯಲ್ಲಿ ಆ ರೀತಿ ಯಾವುದೇ ಹಣ ಇಲ್ಲದ ಕಾರಣ ನೋಟೀಸ ನೀಡುವ ಪ್ರಮೇಯವೇ ಇಲ್ಲ ಎನ್ನುತ್ತಾರೆ. ಸದರಿಯವರು ತನ್ನ ಗ್ರ್ಯಾಚ್ಯುಯಿಟಿ ಹಣದಲ್ಲಿ ಸಾಲದ ಹಣವನ್ನು ವಜಾ ಮಾಡಿಕೊಂಡು ಉಳಿಕೆ ನೀಡುವಂತೆ ಖುದ್ದಾಗಿ ಭೇಟಿ ಮಾಡಿ ಮತ್ತು ಲಿಖಿತವಾಗಿ ಅರ್ಜಿ ಸಲ್ಲಿಸಿ ಕೇಳಿದ್ದರೂ ಎಂದರೆ ಸಾಕ್ಷಿಯು ಗ್ರ್ಯಾಚ್ಯುಯಿಟಿ ಹಣ ಬಂದಾಗ ವಜಾ ಮಾಡಿಕೊಳ್ಳುವಂತೆ ಕೇಳಿದ್ದು ನಾವು ಬಂದರೆ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದರು. ಸದರಿ ಅರ್ಜಿಯ ಪ್ರತಿಯನ್ನು ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಸಾಮಾನ್ಯವಾಗಿ ಸಾಲಗಾರನು ಸಾಲದ ಹಣ ಪಾವತಿ ಮಾಡಲು ವಿಫಲರಾದಾಗ ಜಾಮೀನಾದಾರರಿಂದ ಸದರಿ ಸಾಲ ವಸೂಲಿ ಮಾಡಲು ಪ್ರಯತ್ನಿಸುತ್ತಾರೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಸುಮಾರು 3-4 ಕಂತು ಪಾವತಿಸಿದಾಗ ಜಾಮೀನುದಾರರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎನ್ನುತ್ತಾರೆ. ದೂರುದಾರರ ಬ್ಯಾಂಕಿನಿಂದ ಸಾಲಗಾರರು ಹಣ ಪಾವತಿಸಲು ವಿಫಲರಾದ ನಂತರ ಜಾಮೀನುದಾರರಿಗೆ ಸದರಿ ಸಾಲಗಾರರು ವಿಫಲವಾದ ಸಾಲವನ್ನು ತೀರಿಸಲು ತಾವು ಬಾಧ್ಯರು

ಎಂದು ನೋಟೀಸು ನೀಡಿದ್ದೇವೆ. ಸದರಿ ನೋಟೀಸ ದಿನಾಂಕಗಳು ನನಗೆ ಗೊತ್ತಿಲ್ಲ. ಸದರಿ ನೋಟೀಸಗಳನ್ನು ಹಾಜರು ಪಡಿಸುತ್ತೇನೆ. ಸದರಿ ಸಾಲಗಾರ ಉಮಾಶಂಕರರವರಿಗೆ ಮತ್ತು ಜಾಮೀನುದಾರರಾದ ಆರೋಪಿಯವರಿಗೆ ಸಾಲ ಬಾಕಿ ಉಳಿದ ನಂತರ ಯಾವುದೇ ನೋಟೀಸ ನೀಡಿಲ್ಲದಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಉಮಾಶಂಕರರವರು ಸದರಿ 4 ಲಕ್ಷದ ಸಾಲಕ್ಕೆ ಇಬ್ಬರು ಜಾಮೀನುದಾರರನ್ನು ನೀಡಿದ್ದರು. ಅವರುಗಳೆಂದರೆ ಆರೋಪಿ ಮತ್ತು ಲಕ್ಷ್ಮಿನಾರಾಯಣ ಗೌಡ ಎಂಬುವವರು. ಸದರಿಯವರಿಗೂ ಕೂಡಾ ಮೇಲೆ ಹೇಳಿದಂತೆ ನೋಟೀಸ ನೀಡಿದ್ದೇನೆ. ಉಮಾಶಂಕರರವರಿಗೆ ಸಾಲ ನೀಡುವಾಗ ಸದರಿ ಉಮಾಶಂಕರವರಿಂದ ಸ್ಯಾಲರಿ ಸರ್ಟಿಪೀಕೇಟ್ ಮತ್ತು ಅವರು ಕೆಲಸ ಮಾಡುವ ಅಧಿಕಾರಿಯಿಂದ ಸಾಲ ಪಡೆಯುವ ಅನುಮತಿ ಪತ್ರವನ್ನು ಪಡೆದುಕೊಂಡಿದ್ದೇವೆ ಮತ್ತು ಜಾಮೀನುದಾರರಾದ ಆರೋಪಿಯಿಂದ ಮತ್ತು ಮತ್ತೊಬ್ಬರಾದ ಲಕ್ಷ್ಮಿನಾರಾಯಣಗೌಡರಿಂದ ಸ್ಯಾಲರಿ ಸರ್ಟಿಫಿಕೇಟ್ ಪಡೆದಿರುತ್ತೇವೆ. ಸ್ಯಾಲರಿ ಸರ್ಟಿಫಿಕೇಟ್ ಸಾಲ ನೀಡಲು ಭದ್ರತೆಯಾಗಿರುತ್ತದೆ. ಸಾಲದ ಅರ್ಜಿಯನ್ನು ನಾವೇ ನೀಡಿರುವುದರಿಂದ ಸದರಿಯು ಸಾಲದ ಭದ್ರತೆ ದಾಖಲೆಯಲ್ಲಿ ಬರುವುದಿಲ್ಲ . ಸದರಿ ದಾಖಲೆಯನ್ನು ಹೊರತು ಪಡಿಸಿ ಬೇರೆ ದಾಖಲೆ ಪಡೆಯುವುದಿಲ್ಲ. ಸಾಕ್ಷಿ ಮುಂದುವರೆದು ಸಾಲ ನೀಡದೇ ವಸೂಲಿಗೆ ಹೋದಾಗ ಚೆಕ್ಕು ನೀಡಿದ್ದಲ್ಲಿ ಪಡೆದುಕೊಳ್ಳುತ್ತೇವೆ. ಸಾಲ ವಸೂಲಿಗೆ ಹೋದಾಗ ಸದರಿ ಉಮಾಶಂಕರ, ಲಕ್ಷ್ಮಿನಾರಾಯಣಗೌಡ ಮತ್ತು ಆರೋಪಿಯವರು ತಮ್ಮಗಳ ಚೆಕ್ಕನ್ನು ನೀಡಿದ್ದರು. ಸದರಿ ಚೆಕ್ಕುನ್ನು ಒಂದೇ ಬಾರಿಗೆ ನೀಡಿರದೇ ವಸೂಲಾತಿಗೆ ಹೋಗಿದ್ದಾಗ ಯಾರು ಯಾರು ಲಭ್ಯವಿದ್ದರೋ ಅವರಿಂದ ಪಡೆಯಲಾಗಿದೆ. ಯಾರು ಮೊದಲು ಚೆಕ ನೀಡಿದ್ದಾರೆ

ಮತ್ತು ಯಾರು ನಂತರದಲ್ಲಿ ಚೆಕ ನೀಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಉಮಾಶಂಕರವರ ವಿರುದ್ಧ ಉಳಿಕೆ ಸಾಲ ಮತ್ತು ಬಡ್ಡಿ ಹಣ ಸೇರಿ 3 ಲಕ್ಷ 20 ಸಾವಿರಕ್ಕೆ ಪ್ರಕರಣ ದಾಖಲಿಸಿದ್ದು , ಸದರಿ ಪ್ರಕರಣ ಸಂಖ್ಯೆ ನನಗೆ ನೆನಪಿಲ್ಲ. ಸದರಿ ಪ್ರಕರಣ ನಂಬರ್ ಸಿಸಿ 1565/2023 ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಪ್ರಕರಣವನ್ನು ಸದರಿ ಉಮಾಶಂಕರ ವಿರುದ್ಧ ಪ್ರಕರಣ ದಾಖಲಿಸುವ ಪೂರ್ವದಲ್ಲಿಯೇ ಹೂಡಿದ್ದೇನೆ ಎಂದರೆ ಸರಿ. ಅದರಂತೆ ಲಕ್ಷ್ಮಿನಾರಾಯಣಗೌಡರ ವಿರುದ್ಧ ಕೂಡಾ ಉಮಾಶಂಕರ ವಿರುದ್ಧ ಪ್ರಕರಣ ದಾಖಲಿಸುವ ಪೂರ್ವದಲ್ಲಿಯೇ ಅಥವಾ ನಂತದರಲ್ಲಿ ಹೂಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣಗಳು ಇನ್ನೂ ಇತ್ಯರ್ಥಕ್ಕಾಗಿ ಬಾಕಿ ಇದೆ ಎಂದರೆ ಸರಿ . 3 ಪ್ರಕರಣಗಳಿಂದ ನಾನು ಒಟ್ಟು ರೂ. 6,60,000/- ಮೊತ್ತಕ್ಕೆ ಹೂಡಿದ್ದು ದೂರುದಾರರ ಬ್ಯಾಂಕಿಗೆ 3,20,000/- ರೂಪಾಯಿ ಬಾಕಿ ಬರಬೇಕು. ನಾನು ನೋಟೀಸನಲ್ಲಿ ಸದರಿ ಸಾಲದ ಮೊತ್ತಕ್ಕೆ ಯಾರು ಯಾರು ಚೆಕ ಪಡೆದುಕೊಂಡಿದ್ದೇವೆ ಮತ್ತು ತೀರುವಳಿಗಾಗಿ ಯಾರ ಯಾರ ಚೆಕ್ಕನ್ನು ಬ್ಯಾಂಕಿಗೆ ಹಾಜರು ಪಡಿಸಿದ್ದೇವೆ ಎಂದು ಹೇಳಿರುವುದಿಲ್ಲ . ಸಾಕ್ಷಿ ಮುಂದುವರೆದು ಆರೋಪಿಯು ನೀಡಿದ ಚೆಕ್ಕನ ಬಗ್ಗೆ ಹೇಳಿದ್ದೇವೆ ಎನ್ನುತ್ತಾರೆ. ಸದರಿ ವಿಚಾರವನ್ನು ನೋಟೀಸನಲ್ಲಿ ಹೇಳಲು ತೊಂದರೆ ಇರಲಿಲ್ಲ. ಸದರಿ ವಿಚಾರವನ್ನು ದೂರಿನಲ್ಲಿ ಹೇಳಲು ಕೂಡಾ ತೊಂದರೆ ಇರಲಿಲ್ಲ. ಪ್ರಸ್ತುತ ದೂರನ್ನು ದಾಖಲಿಸುವ ಪೂರ್ವದಲ್ಲಿ ಉಮಾಶಂಕರ ಮತ್ತು ಲಕ್ಷ್ಮಿನಾರಾಯಣಗೌಡರವರು ಚೆಕ್ ನೀಡಿರಲಿಲ್ಲ ಆದ್ದರಿಂದ ಸದರಿ ವಿಚಾರವನ್ನು ದೂರಿನಲ್ಲಿ ಹೇಳಿರುವುದಿಲ್ಲ. ಸದರಿ ಸಾಲಗಾರರಾದ ಉಮಾಶಂಕರ ಮತ್ತು ಜಾಮೀನುದಾರರಾದ ಲಕ್ಷ್ಮಿನಾರಾಯಣಗೌಡರವರಿಗೆ ನೀಡಿದ ನೋಟೀಸನಲ್ಲಿ ಆರೋಪಿ ಚೆಕ್ಕು

ನೀಡಿದ ವಿಚಾರವನ್ನು ಮತ್ತು ಅವರ ವಿರುದ್ಧ ಪ್ರಕರಣ ದಾಖಲಿಸಿದ ವಿಚಾರವನ್ನು ನೋಟೀಸನಲ್ಲಿ ಹೇಳಲು ತೊಂದರೆ ಇರಲಿಲ್ಲ.

ನಾನು ಪ್ರಕರಣ ದಾಖಲಿಸುವ ಸಮಯದಲ್ಲಿ ಸಾಲದ ಅರ್ಜಿ ಮತ್ತು ಜಾಮೀನುದಾರರ ಅರ್ಜಿಯನ್ನು ದಾಖಲಿಸಿದ್ದೇನೆ. ಸಾಕ್ಷಿಯು ಕಡತವನ್ನು ಪರಿಶೀಲಿಸಿ ದಾಖಲಾತಿ ಹಾಜರು ಪಡಿಸಿಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ಸಾಲಗಾರರ ವಿರುದ್ಧ ನೋಟೀಸ ನೀಡಲು ಅಥವಾ ಪ್ರಕರಣ ದಾಖಲಿಸಲು ಕಮಿಟಿಯಲ್ಲಿ ಅಥವಾ ಮೇಲಾಧಿಕಾರಿಯಿಂದ ಒಂದು ನಡಾವಳಿ ಜಾರಿಯಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವ್ಯವಸ್ಥಾಪಕರಿಗೆ ಸದರಿ ನೋಟೀಸು ನೀಡುವ ಅಥವಾ ಪ್ರಕರಣ ದಾಖಲಿಸುವ ಅಧಿಕಾರ ಇರುತ್ತದೆ ಎನ್ನುತ್ತಾರೆ. ಸದರಿ ವಿಚಾರ ಬ್ಯಾಂಕಿನ ನಡಾವಳಿಯಲ್ಲಿದ್ದು ಅದನ್ನು ಹಾಜರು ಪಡಿಸುತ್ತೇನೆ. ಸದರಿ ಸಾಲದ ಹಣವನ್ನು ಸಾಲಗಾರರಾದ ಉಮಾಶಂಕರರವರಿಂದ ನೇರವಾಗಿ ವಸೂಲಿ ಮಾಡಲು ತೊಂದರೆ ಇರಲಿಲ್ಲ ಸಾಕ್ಷಿ ಮುಂದುವರೆದು ಅವರ ವಿರುದ್ಧವೂ ಪ್ರಕರಣ ದಾಖಲಿಸಿದ್ದೇವೆ ಎನ್ನುತ್ತಾರೆ. ಸದರಿಯವರಿಗೆ ಸಾಕಷ್ಟು ಆಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ಸ್ಯಾಲರಿ ಮೇಲೆ ಸಾಲ ನೀಡಿರುವುದರಿಂದ ಬೇರೆ ವಿಚಾರ ಗೊತ್ತಿಲ್ಲ. ಸದರಿ ಸಾಲಗಾರರ ಆಸ್ತಿ ಮತ್ತು ಮನೆ ಇರುವ ಬಗ್ಗೆ ತಿಳಿದುಕೊಳ್ಳಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ಸ್ಯಾಲರಿ ಮೇಲೆ ಸಾಲ ನೀಡುವುದರಿಂದ ಅದೇ ಷರತ್ತಿನ ಮೇಲೆ ಸಾಲ ನೀಡುವುದರಿಂದ ನಾನು ಆಸ್ತಿ ಮತ್ತು ಮನೆ ಇರುವ ಬಗ್ಗೆ ತಿಳಿದುಕೊಂಡಿರುವುದಿಲ್ಲ. ಸಾಲಗಾರ ಉಮಾಶಂಕರ ವಿರುದ್ಧ ಸಾಲ ವಸೂಲಿ ಮಾಡಬಹುದು ಎಂದು ಗೊತ್ತಿದ್ದರೂ ಸಹಾ ದುರುದ್ದೇಶವಾಗಿ ಜಾಮೀನುದಾರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸಾಲ ಪಡೆಯಲು

ಅರ್ಜಿ ಸಲ್ಲಿಸಿದಾಗಲೇ ಸಾಲಗಾರರಿಂದ ಮತ್ತು ಜಾಮೀನುದಾರರಿಂದ ಚೆಕ ಪಡೆದುಕೊಳ್ಳುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಾಲ ವಸೂಲಾತಿಗಾಗಿ ಹೋದಾಗ ಚೆಕ ಪಡೆದುಕೊಳ್ಳುತ್ತೇವೆ ಎನ್ನುತ್ತಾರೆ.

**ಮುಂದುವರೆದ ಪಾಟೀಸವಾಲಿಗಾಗಿ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು